## ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು-12

ಸಂಖ್ಯೆ: ಪಮೂಶಿ/ಸಿಬ್ಬಂದಿ-3/ಹೊಕಾಅ/2016-17

ದಿನಾಂಕ:25-01-2018.

2018-19ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಆಡಳಿತ ಮಂಡಳಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು, ಅರ್ಜಿಯನ್ನು ಆನ್ ಲೈನ್‌ನಲ್ಲಿ ಭರ್ತಿಮಾಡಲು ಅನುಸರಿಸಬೇಕಾದ ವಿಧಾನಗಳು.

1. ಉದ್ದೇಶಿತ ಪದವಿ ಪೂರ್ವ ಕಾಲೇಜಿನ ಹೆಸರು ಮತ್ತು ಪೂರ್ಣ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ.
2. ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಆಡಳಿತ ಮಂಡಳಿಯ ಹೆಸರು ಮತ್ತು ಪೂರ್ಣ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ. (Enclose Copy of the certificate of Registration, Copy of the Memorandum of Association etc., of the society, Trust deed etc. see Section 2(17)
3. ಪ್ರಸ್ತಾಪಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಹೊಂದಿರುವ ಉದ್ದೇಶಗಳು. (MAX 450 Characters)
4. ಪ್ರಸ್ತಾಪಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಗದಿಪಡಿಸಿರುವ ವರ್ಷ. (ಉದಾಹರಣೆಗೆ: 2018-19)
5. ಪ್ರಸ್ತಾಪಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಬಯಸುತ್ತಿರುವ ವಿವರ. (ಬಾಲಕರ/ಬಾಲಕಿಯರ/ಸಹಶಿಕ್ಷಣ/ಸ್ವತಂತ್ರ/ಸಂಯುಕ್ತ).
6. ಭರ್ತಿ ಮಾಡುವುದು ಕಡ್ಡಾಯವಾಗಿರುವುದಿಲ್ಲ.
7. ಪ್ರಸ್ತಾಪಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಆಡಳಿತ ಮಂಡಳಿಯು ಅರ್ಜಿ ಸಲ್ಲಿಸುವ ಪೂರ್ವದಲ್ಲಿ ನಡೆಸಲಾಗುತ್ತಿರುವ ಶಿಕ್ಷಣ ಸಂಸ್ಥೆಗಳ ವಿವರ. (MAX 450 Characters)
8. ಪ್ರಸ್ತಾಪಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳದ ಸಾರ್ವಜನಿಕರಿಗೆ ಅವಶ್ಯವಿರುವ ಶೈಕ್ಷಣಿಕ ಸೌಲಭ್ಯಗಳನ್ನು ನೀಡುವ ಬಗ್ಗೆ ವಿವರಗಳು:

ಎ). ಜನಸಂಖ್ಯೆ (ಜನಗಣತಿ ವರದಿ ಆಧಾರಿತ)

ಬಿ). ಶೇಕಡಾವಾರು ಸಾಕ್ಷರತೆ.

ಸಿ). ಪ್ರಸ್ತಾಪಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳದ ಸುತ್ತಮುತ್ತಲಿನ ಶೈಕ್ಷಣಿಕ ಸಂಸ್ಥೆಗಳ ವಿವರ:

I. ಸ್ಥಳದ ಸುತ್ತಮುತ್ತಲಿನ ಪದವಿ ಪೂರ್ವ ಕಾಲೇಜುಗಳ ವಿವರ ಹಾಗೂ ದೂರ.

| | ಕಾಲೇಜು ಸಂಕೇತ ಸಂಖ್ಯೆ | ದೂರ(ಕಿ.ಮೀ.ಗಳಲ್ಲಿ) |
|---|---|---|
| ಕಾಲೇಜು 1: | | |
| ಕಾಲೇಜು 2: | | |
| ಕಾಲೇಜು 3: | | |
| ಕಾಲೇಜು 4: | | |

ಡಿ). ಉದ್ದೇಶಿತ ಸ್ಥಳದ ಸುತ್ತಮುತ್ತ ಇರುವ ಪ್ರೌಢಶಾಲೆಗಳ(ಫೀಡರ್ ಸಂಸ್ಥೆಗಳು) ಡೈಸ್‌ಕೋಡ್ ಹಾಗೂ ದೂರದ ವಿವರ:

| | ಶಾಲಾ ಡೈಸ್ ಸಂಖ್ಯೆ | ದೂರ(ಕಿ.ಮೀ.ಗಳಲ್ಲಿ) |
|---|---|---|
| ಪ್ರೌಢಶಾಲೆ 1: | | |
| ಪ್ರೌಢಶಾಲೆ 2: | | |
| ಪ್ರೌಢಶಾಲೆ 3: | | |
| ಪ್ರೌಢಶಾಲೆ 4: | | |

ಇ) ಸ್ಥಳೀಯ ನಿವಾಸಿಗಳ ಹಾಗೂ ಅವರ ಹಿಂದುಳಿವಿಕೆಯ ವಿವರಗಳು (ನಿಖರವಾದ ಅಂಕಿ ಅಂಶಗಳೊಂದಿಗೆ):

1. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ.
2. ಬಾಲಕಿಯರು, ಅಂಗವಿಕಲ ಮಕ್ಕಳು.
3. ಅಲ್ಪಸಂಖ್ಯಾತ ಸಮುದಾಯ.

9. ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಭರ್ತಿಮಾಡುವುದು:

ಎ) ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ಅನುಸಾರ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯಗಳು, ಪಾಠೋಪಕರಣ, ಪೀಠೋಪಕರಣ, ಉಪಕರಣಗಳು, ಇತ್ಯಾದಿಗಳನ್ನು ಒದಗಿಸುವ ಬಗ್ಗೆ ಪ್ರಸ್ತುತ ಮಾರುಕಟ್ಟೆ ದರದಂತೆ ತಗಲುವ ಅಂದಾಜು ವೆಚ್ಚ.

ಬಿ) ಆಡಳಿತ ಮಂಡಳಿಯ ಚಾರ್ಟರ್ಡ್ ಆಕೌಂಟೆಂಟ್ ರಿಂದ ಆಡಿಟ್ ಮಾಡಿದ ಇತ್ತೀಚಿನ ದೃಢೀಕೃತ ಆಯವ್ಯಯ ವಿವರ, ಆಯವ್ಯಯ ಹೇಳಿಕೆ ಸೆಕ್ಷನ್ 2(17)ನ್ನು ನೋಡಿ.

1.ಆಡಳಿತ ಮಂಡಳಿ ಹೊಂದಿರುವ ಸ್ಥಿರಾಸ್ತಿ ಮತ್ತು ಚರಾಸ್ತಿ ವಿವರ.

ಸಿ) ಆಡಳಿತ ಮಂಡಳಿಯ ಬ್ಯಾಂಕ್ ಖಾತೆಯಲ್ಲಿರುವ ನಗದು ಹಣದ ಬಗ್ಗೆ ದೃಢೀಕೃತ ಪ್ರತಿ.

ಡಿ) ಕಟ್ಟಡ ನಿರ್ಮಾಣ, ಆಟದ ಮೈದಾನ, ಇತ್ಯಾದಿಗಳನ್ನು ಒದಗಿಸಲು ಆಡಳಿತ ಮಂಡಳಿಯ ಹೆಸರಿನಲ್ಲಿರುವ ನಿವೇಶನದ ವಿಸ್ತೀರ್ಣದ ಬಗ್ಗೆ ಮೂಲ ದಾಖಲೆಗಳ ಛಾಯಾ ಪ್ರತಿಗಳು.(Title Deeds)

ಇ) ಪದವಿ ಪೂರ್ವ ಶಿಕ್ಷಣ ಇಲಾಖೆ ನಿಯಮಗಳು 2006ರ ನಿಯಮ 4(2)ರಂತೆ ಕಟ್ಟಡದ ನೀಲಿ ನಕ್ಷೆ.

ಎಫ್) ಆಡಳಿತ ಮಂಡಳಿಯು ನಡೆಸುತ್ತಿರುವ ಇತರೆ ಶಿಕ್ಷಣ ಸಂಸ್ಥೆಗಳ ವಾರ್ಷಿಕ ಆಡಿಟ್ ವರದಿಗಳ ಇತ್ತೀಚಿನ ದೃಢೀಕೃತ ಪ್ರತಿ.

ಜಿ) ಆಡಳಿತ ಮಂಡಳಿಯು ಪ್ರಾರಂಭಿಸಲು ಉದ್ದೇಶಿಸಿರುವ ಪದವಿ ಪೂರ್ವ ಕಾಲೇಜಿಗೆ ನೇಮಕಾತಿ ಮಾಡಿಕೊಳ್ಳುವ ಪ್ರಾಚಾರ್ಯರ, ಉಪನ್ಯಾಸಕರ ಮತ್ತು ಬೋಧಕೇತರ ಸಿಬ್ಬಂದಿಯ ಹೆಸರು, ವಿಳಾಸ, ವಿದ್ಯಾರ್ಹತೆ ಮತ್ತು ಸೇವಾನುಭವಗಳ ವಿವರ.(ವಿದ್ಯಾರ್ಹತೆಯು ಸರ್ಕಾರ ಆಯಾ ವೃಂದಕ್ಕೆ ನಿಗದಿಪಡಿಸಿದಂತೆ).

ಹೆಚ್) ಅರ್ಜಿ ಸಲ್ಲಿಸಲು ಹಾಗೂ ಇಲಾಖೆಯೊಂದಿಗೆ ವ್ಯವಹರಿಸಲು ಆಡಳಿತ ಮಂಡಳಿಯು ಸಂಸ್ಥೆಯ ಕಾರ್ಯದರ್ಶಿ/ ಸಂಚಾಲಕರಿಗೆ ಅಧಿಕಾರ ನೀಡಲು ಕೈಗೊಂಡ ನಿರ್ಣಯದ ಪ್ರತಿ.

ಐ) ಇಲಾಖೆ/ಸರ್ಕಾರದೊಂದಿಗೆ ವ್ಯವಹರಿಸಲು ಆಡಳಿತ ಮಂಡಳಿಯು ಅಧಿಕಾರ ನೀಡಿದ ಸಂಚಾಲಕ/ಕಾರ್ಯದರ್ಶಿಯವರ ಹೆಸರು, ಪೂರ್ಣ ಅಂಚೆ ವಿಳಾಸ, ಮೊಬೈಲ್ ಸಂಖ್ಯೆ ಹಾಗು ಇ-ಮೇಲ್ ವಿಳಾಸ. (MAX 450 Characters)

ಜೆ) ಆಡಳಿತ ಮಂಡಳಿಯ ನೋಂದಣಿ ವಿವರ. ಟ್ರಸ್ಟ್ ಆಗಿದ್ದಲ್ಲಿ ಪ್ರಸ್ತುತ ಸಾಲಿನ ಪಿ.ಟಿ.ಆರ್ ವರದಿ ಹಾಗೂ ಸಂಸ್ಥೆಯಾಗಿದ್ದಲ್ಲಿ ಇತ್ತೀಚಿನ ನವೀಕರಿಸಿರುವ ಪ್ರತಿ.

ಕೆ) ಆಡಳಿತ ಮಂಡಳಿಯ ಹೆಸರಿನಲ್ಲಿರುವ ಸ್ವಂತ ನಿವೇಶನ/ಮೂವತ್ತು ವರ್ಷಗಳ ಅವಧಿಗೆ ಭೋಗ್ಯಕ್ಕೆ ಪಡೆದಿರುವ ದಾಖಲೆ.

ಎಲ್) ಟ್ರಸ್ಟ್ ಡೀಡ್/ ಸಂಸ್ಥೆಯ ಬೈಲಾ ಪ್ರತಿ.

10 ಆಡಳಿತ ಮಂಡಳಿಯ ಎಲ್ಲಾ ಸದಸ್ಯರ ಹೆಸರು, ತಂದೆಯ ಹೆಸರು, ವಯಸ್ಸು, ವಿದ್ಯಾರ್ಹತೆ, ವೃತ್ತಿ ವಿವರ.

11 ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರ ಹೆಸರು, ತಂದೆಯ ಹೆಸರು, ವಯಸ್ಸು, ವಿದ್ಯಾರ್ಹತೆ, ವೃತ್ತಿ ಮತ್ತು ಇಮೇಲ್ ವಿಳಾಸ {ಸೆಕ್ಷನ್ 2(a) ನೋಡುವುದು}

12 ಪ್ರಾರಂಭಿಸಲು ಉದ್ದೇಶಿಸಿರುವ ಪದವಿ ಪೂರ್ವ ಕಾಲೇಜಿಗೆ ಆಡಳಿತ ಮಂಡಳಿಯು ಒದಗಿಸಿಕೊಂಡಿರುವ / ಒದಗಿಸಿಕೊಳ್ಳಬೇಕಾಗಿರುವ ಮೂಲಭೂತ ಸೌಲಭ್ಯಗಳ ವಿವರ.(If conditions mentioned as per rules 2006 rule 4 are not met, the Intent Letter issued by Director, Pre University Education will stand invalid after completion of period specified in Intent Letter.)

1. ಪ್ರಾಚಾರ್ಯರ ಕೊಠಡಿ ಕನಿಷ್ಠ 250 ಚದರ ಅಡಿ. [ಇದೆ/ಇಲ್ಲ]
2. ಕಚೇರಿ ಕೊಠಡಿ ಕನಿಷ್ಠ 250 ಚದರ ಅಡಿ. [ಇದೆ/ಇಲ್ಲ]
3. ಸಿಬ್ಬಂದಿ ಕೊಠಡಿ ಕನಿಷ್ಠ 500 ಚದರ ಅಡಿ. [ಇದೆ/ಇಲ್ಲ]

4. ವಿದ್ಯಾರ್ಥಿನಿಯರ ನಿರೀಕ್ಷಣಾ ಕೊಠಡಿ ಕನಿಷ್ಠ 500 ಚದರ ಅಡಿ ಹಾಗೂ ಸಾಕಷ್ಟು ನೀರಿನ ಸೌಲಭ್ಯದೊಂದಿಗೆ 10 ಜನರು ಬಳಸುವಂತಹ ಶೌಚಾಲಯಗಳು [ಇದೆ/ಇಲ್ಲ]
5. ಸಾಕಷ್ಟು ನೀರಿನ ಸೌಲಭ್ಯದೊಂದಿಗೆ ಕನಿಷ್ಠ 10 ಬಾಲಕರು (ಅಂಗವಿಕಲ ವಿದ್ಯಾರ್ಥಿಗಳನ್ನು ಒಳಗೊಂಡಂತೆ) ಬಳಸುವಂತಹ ಶೌಚಾಲಯಗಳು [ಇದೆ/ಇಲ್ಲ]
6. ಗ್ರಂಥಾಲಯ ಕೊಠಡಿ ಕನಿಷ್ಠ 1000 ಚದರ ಅಡಿ. [ಇದೆ/ಇಲ್ಲ]
7. ವಾಚನಾಲಯ ಕೊಠಡಿ ಕನಿಷ್ಠ 1000 ಚದರ ಅಡಿ. [ಇದೆ/ಇಲ್ಲ]
8. ಕನಿಷ್ಠ 6 ಉಪನ್ಯಾಸ ಕೊಠಡಿಗಳು, ಪ್ರತಿ ಕೊಠಡಿ ಕನಿಷ್ಠ ಪಕ್ಷ 22*30 ಅಳತೆಯ. [ಇದೆ/ಇಲ್ಲ]
9. ಕಾಲೇಜಿನಲ್ಲಿ ಕನಿಷ್ಠ 100 ಬೈಸಿಕಲ್ ನಿಲ್ಲಿಸಲು ಸ್ಥಳಾವಕಾಶ. [ಇದೆ/ಇಲ್ಲ]
10. ವಿಜ್ಞಾನ ವಿಷಯಗಳು ಪ್ರಾರಂಭಿಸಲು ಇಚ್ಛಿಸದಲ್ಲಿ ಪ್ರತಿ ವಿಷಯಕ್ಕೆ ಪ್ರತ್ಯೇಕ ಪ್ರಯೋಗಾಲಯ ಕೊಠಡಿಗಳು ಕನಿಷ್ಠ ಪಕ್ಷ 24*60 ಅಳತೆಯ. [ಇದೆ/ಇಲ್ಲ]
11. ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿಯೇ 25000 ಚದರ ಅಡಿಗಳ ನಿವೇಶನ. [ಇದೆ/ಇಲ್ಲ]

13. ಅರ್ಜಿ ಶುಲ್ಕ ಪಾವತಿ ವಿವರ.(ಜಮಾ ಮಾಡ ಬೇಕಾದ ಲೆಕ್ಕ ಶೀರ್ಷಿಕೆ "2202-01-102-1-06")
   1. ಚಲನ್ ಸಂಖ್ಯೆ:
   2. ಚಲನ್ ಖರೀದಿಸಿದ ದಿನಾಂಕ:
   3. ಚಲನ್ ಮೊತ್ತ:
   4. ಬ್ಯಾಂಕಿನ ಹೆಸರು:
   5. ಬ್ಯಾಂಕಿನ ಹೆಸರು ಮತ್ತು ವಿಳಾಸ:
   (MAX 450 Characters)

"ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ"

25/1/18
ನಿರ್ದೇಶಕರ ಪರವಾಗಿ
ಪದವಿ ಪೂರ್ವ ಶಿಕ್ಷಣ ಇಲಾಖೆ.

| Welcome to Online New Pre-University College Process- 2018-19 |
|---|
| Instructions to be followed before filling the Application Form: |
| 1. Please use Google Chrome/Internet Explorer 9.0/ Mozilla Firefox Browser.<br>2. This software is only for opening of new Pre University Colleges.<br>3. Information should be correct and true. Your application will be Rejected, if any information found not correct in future.<br>4. Please go through detailed Instructions before filling up the Application form.<br>5. Please ensure data is properly filled, Where you specify 'Enclosed' necessary documents should be attached and uploaded.<br>6. Application Fee Amount should be paid through Challan **(Head of Account "2202-1-102-1-06")** on or before 31-01-2018. **(Challan Amount will not be Refunded)**<br>7. After the Completion of online entry process, Download the Hard copy of the Application alongwith enclosures and submit the copy to Deputy Director (R & G), Pre-University Education, Malleshwaram 18th cross, Bengaluru-560012,<br>8. If you have any technical issues please contact Mobile Number **9738429882, 9448215402** or Email to **pueest3@gmail.com** |
| Detailed Instructions     Print Acknowledgment     Apply-Form-1 |

## ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು-12.

ಸಂಖ್ಯೆ: ಪಪೂಶಿ/ಸಿಬ್ಬಂದಿ-3/ಹೊಕಾಅ/2016-17

ದಿನಾಂಕ:25-01-2018.

**ಪದವಿ ಪೂರ್ವ ಕಾಲೇಜುಗಳ ನೋಂದಣಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕಾರ್ಯವಿಧಾನ**

2018-19ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಅರ್ಹ ನೋಂದಾಯಿತ ಟ್ರಸ್ಟ್ / ಸಂಸ್ಥೆಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಇಲಾಖಾ ವೆಬ್‌ಸೈಟ್‌ನಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ (ವೆಬ್‌ಸೈಟ್ ವಿಳಾಸ: www.pue.Kar.nic.in ).

1) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 136 ಟಿಪಿಯು 1999. ದಿನಾಂಕ:09-10-2006ರನ್ವಯ ಜಾರಿಯಾಗಿರುವ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಅನುದಾನ, ಇತ್ಯಾದಿ) ನಿಯಮಗಳು 2006, ಈ ನಿಯಮಗಳ ನಿಯಮ 4(2) ಮತ್ತು 4(3) ರಂತೆ, ಕೆಳಕಂಡ ಕ್ರಮಗಳನ್ನು ಅನುಸರಿಸುವುದು:

1. ಸಂಸ್ಥೆ / ಟ್ರಸ್ಟ್ ಹೊಸದಾಗಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳದಲ್ಲಿ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2)(a) ರಂತೆ ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿಯೇ (ಪ್ರತ್ಯೇಕವಾಗಿ) 25000 (ಇಪ್ಪತ್ತೈದು ಸಾವಿರ) ಚದರ ಅಡಿಗಳ ನಿವೇಶನವನ್ನು ಹೊಂದಿರಬೇಕು ಹಾಗೂ ನಿಯಮ 4(2)ರಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರಾಂಶುಪಾಲರ ಕೊಠಡಿ, ಕಚೇರಿ ಕೊಠಡಿ, ಸಿಬ್ಬಂದಿ ಕೊಠಡಿ, ಬೋಧನಾ ಕೊಠಡಿಗಳು, ಗ್ರಂಥಾಲಯ, ಪ್ರಯೋಗಾಲಯಗಳು, ಶೌಚಾಲಯ, ಸೈಕಲ್ ಸ್ಟ್ಯಾಂಡ್, ಆಟದ ಮೈದಾನ ಹಾಗೂ ನೀರಿನ ಸೌಲಭ್ಯ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ಸುಸಜ್ಜಿತ ಕಟ್ಟಡವನ್ನು ಹೊಂದಿರತಕ್ಕದ್ದು.
2. ಸದರಿ ನಿವೇಶನವು ಸಂಸ್ಥೆಯ/ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿದ್ದು, ಸಂಸ್ಥೆಯ ಅಧ್ಯಕ್ಷರ / ಕಾರ್ಯದರ್ಶಿಯ ಪದನಾಮದಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ನಿಯಮಗಳ ಅನ್ವಯ ನೋಂದಣಿಯಾಗಿರಬೇಕು.
3. ನಿವೇಶನ / ಕಟ್ಟಡವನ್ನು ಬಾಡಿಗೆಗೆ ಪಡೆದು ಪದವಿ ಪೂರ್ವ ಕಾಲೇಜನ್ನು ನಡೆಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.
4. Letter of intent ಪಡೆದ 03 (ಮೂರು) ವರ್ಷದೊಳಗೆ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳದಿದ್ದಲ್ಲಿ, ನಿಯಮ 4(4) ರಂತೆ ಅವಧಿಯನ್ನು ವಿಸ್ತರಿಸಲು ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ, ನೀಡಿರುವ Letter of intentನ್ನು ನಿಯಮ 4(12) ರಂತೆ ರದ್ದುಗೊಳಿಸಲಾಗುವುದು. Letter of intent ಮೂರು ವರ್ಷಗಳ ನಂತರ ತನ್ನ ಸಿಂಧುತ್ವವನ್ನು / ಮಾನ್ಯತೆಯನ್ನು ಕಳೆದುಕೊಳ್ಳುವುದರಿಂದ ಮೂರು ವರ್ಷಗಳೊಳಗೆ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳದಿದ್ದಲ್ಲಿ, ಮುಂದಿನ ವರ್ಷಗಳಲ್ಲಿ ಪುನಃ ಹೊಸದಾಗಿ ಅರ್ಜಿ ಶುಲ್ಕವನ್ನು ಸಂದಾಯಿಸಿ ಅರ್ಜಿ ಸಲ್ಲಿಸಬೇಕಾಗುತ್ತದೆ.
5. ಒಂದು ವೇಳೆ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮ 4(2) ಮತ್ತು 4(3) ರಂತೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದ್ದಲ್ಲಿ, ನಿಯಮ 4(4) ರಂತೆ ಅಗತ್ಯ ಮಾಹಿತಿ ಮತ್ತು ದಾಖಲೆಗಳೊಂದಿಗೆ ವೇಳಾಪಟ್ಟಿಗೆ ಅನುಗುಣವಾಗಿ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.

2) ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಬಹು ಮುಖ್ಯವಾಗಿ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು:

1. ಸಂಸ್ಥೆ / ಟ್ರಸ್ಟ್ ಅಧಿಕೃತವಾಗಿ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರಬೇಕು.
2. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರಬಾರದು. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ಯಾವುದೇ ರೀತಿಯ ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆ ನೀಡಿರಬಾರದು. ಸಂಸ್ಥೆಯನ್ನು ಟ್ರಸ್ಟ್ ಆಗಿ ಅಥವಾ ಟ್ರಸ್ಟ್‌ನ್ನು ಸಂಸ್ಥೆಯಾಗಿ ನಿಯಮಬಾಹಿರವಾಗಿ ಪರಿವರ್ತಿಸಿರಬಾರದು. ಈ ಬಗ್ಗೆ ಸಂಸ್ಥೆ/ಟ್ರಸ್ಟ್‌ನ ಸಕ್ಷಮ ಪ್ರಾಧಿಕಾರಿಯು ರೂ.200/-ರ ಇ-ಸ್ಟ್ಯಾಂಪ್ ಪೇಪರ್‌ನಲ್ಲಿ ನೋಟರಿ ದೃಢೀಕೃತ ಅಫಿಡವಿಟ್ (ಪ್ರಮಾಣ ಪತ್ರ) ಸಲ್ಲಿಸತಕ್ಕದ್ದು.
3. ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಪ್ರಸ್ತುತ ಸಾಲಿನವರೆಗೆ ನವೀಕರಣಗೊಂಡಿರಬೇಕು. ಸಕ್ಷಮ ಪ್ರಾಧಿಕಾರವು ದೃಢೀಕರಿಸಿರುವ ಪ್ರಸ್ತುತ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯರ ದೃಢೀಕೃತ ಪಟ್ಟಿಯನ್ನು ಹೊಂದಿರಬೇಕು.
4. ಸಂಸ್ಥೆಯ ಬೈಲಾದಲ್ಲಿರುವಂತೆ ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯರಿರಬೇಕು.
5. ಸಂಸ್ಥೆ / ಟ್ರಸ್ಟ್ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮಗಳನ್ವಯ **ರೂ.28.80 ಲಕ್ಷಗಳ** ಸ್ಥಿರ ಮತ್ತು ಚರ ಆಸ್ತಿಯನ್ನು ಹೊಂದಿರಬೇಕು.
6. ಸಂಸ್ಥೆ / ಟ್ರಸ್ಟ್‌ನ ಆಡಿಟ್‌ನ್ನು ನಿಯಮಾನುಸಾರ ಪ್ರಸ್ತುತ ಸಾಲಿನವರೆಗೆ ಮಾಡಿಸಿರಬೇಕು.
7. ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿ ಸಂಸ್ಥೆ / ಟ್ರಸ್ಟ್ ತನ್ನ ಸ್ವಾಧೀನಾನುಭವದಲ್ಲಿ ಕನಿಷ್ಠ **25000** (ಇಪ್ಪತ್ತೈದು ಸಾವಿರ) ಚದರ ಅಡಿಗಳ ನಿವೇಶನವನ್ನು ಹೊಂದಿರಬೇಕು.
8. ಸದರಿ 25000 ಚದರ ಅಡಿಗಳ ನಿವೇಶನ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಅಧ್ಯಕ್ಷರು / ಚೇರ್‌ಮನ್ / ಕಾರ್ಯದರ್ಶಿಯವರ **ಪದನಾಮದಲ್ಲಿ** ಇರಬೇಕು. ಈ ಸ್ಥಿರ ಆಸ್ತಿಯು ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಇರಬಾರದು.
9. ಕಟ್ಟಡವು ಆಡಳಿತ ಮಂಡಳಿಯ ಸ್ವಂತದ್ದಾಗಿರದೆ **ಭೋಗ್ಯಕ್ಕೆ** ಪಡೆದಿದ್ದಲ್ಲಿ, ಭೋಗ್ಯದ ಕರಾರನ್ನು ಕನಿಷ್ಠ **30 ವರ್ಷಗಳ ಅವಧಿಗೆ** ಮಾಡಿರಬೇಕು. ಸದರಿ ಕರಾರನ್ನು 30 ವರ್ಷಗಳು ಪೂರ್ಣಗೊಳ್ಳುವ ಮುನ್ನ ರದ್ದುಪಡಿಸಲು ಅಥವಾ ತಿದ್ದುಪಡಿ ಮಾಡಲು ಅವಕಾಶವಿಲ್ಲದಂತೆ ಕರಾರು ಒಪ್ಪಂದವಾಗಿರಬೇಕು. ಈ ಕರಾರು ಒಪ್ಪಂದವನ್ನು ನಿಗದಿತ ಮೊತ್ತದ ಇ-ಸ್ಟಾಂಪ್ ಪೇಪರ್‌ನಲ್ಲಿ ಸಂಬಂಧಿಸಿದ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಾಯಿಸಿರಬೇಕು. **ಹಾಗೂ ಸದರಿ ನಿವೇಶನ ಮತ್ತು ಕಟ್ಟಡದ ಖಾತಾ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಹೆಸರಿಗೆ ವರ್ಗಾವಣೆಯಾಗಿರಬೇಕು. ಪ್ರಸ್ತುತ ಸದರಿ ನಿವೇಶನ ಮತ್ತು ಕಟ್ಟಡದ ಖಾತಾ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಹೆಸರಿನಲ್ಲಿರಬೇಕು.**
10. ನೋಟರಿಯವರ ಸಮ್ಮುಖದಲ್ಲಿ ಸ್ವೇರಿಂಗ್ ಮಾಡಿರುವ ಕರಾರು ಪತ್ರಗಳಿಗೆ ನಿಯಮಗಳನ್ವಯ ಮಾನ್ಯತೆ ಇರುವುದಿಲ್ಲ. ಬಾಡಿಗೆ ಕರಾರಿನ ಮೇಲೆ ಪಡೆದಿರುವ ನಿವೇಶನ / ಕಟ್ಟಡವನ್ನು ಸಂಸ್ಥೆ / ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿರುವ ನಿವೇಶನ / ಕಟ್ಟಡ ಎಂದು ಪರಿಗಣಿಸಲು ನಿಯಮಗಳಲ್ಲಿ ಅವಕಾಶಗಳಿರುವುದಿಲ್ಲ.
11. ಉದ್ದೇಶಿತ ಪದವಿ ಪೂರ್ವ ಕಾಲೇಜಿನ ನಿವೇಶನ / ಕಟ್ಟಡದಲ್ಲಿ ನಿಯಮ 4ರನ್ವಯ ಮೂಲಭೂತ ಸೌಲಭ್ಯಗಳಿರಬೇಕು.
**12. ಸರ್ಕಾರಿ ಪದವಿ ಪೂರ್ವ ಕಾಲೇಜು ಇರುವ 3 ಕಿಲೋಮೀಟರ್ ಅಂತರದಲ್ಲಿ ಯಾವುದೇ ಹೊಸ ಅನುದಾನರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅನುಮತಿ ನೀಡಬಾರದು.**
**13. ಈಗಾಗಲೇ ಅನುದಾನಸಹಿತ, ಅನುದಾನರಹಿತ ಕಾಲೇಜುಗಳಿದ್ದಲ್ಲಿ ಅಂತಹ ಸ್ಥಳದಲ್ಲಿ ಹೊಸ ಅನುದಾನರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬಾರದು ಇದರ ಅಂತರವು ಸಹ 3 ಕಿಲೋ ಮೀಟರ್ ಆಗಿರಬೇಕು.**

3) ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ಸಲ್ಲಿಸುವ ಪ್ರಸ್ತಾವನೆಯು ನಿಯಮ 4(2), 4(3) ಮತ್ತು 4(4)ಕ್ಕೆ ಅನುಗುಣವಾಗಿ ಇಲ್ಲದಿದ್ದಲ್ಲಿ ತಪಾಸಣಾ ಸಮಿತಿಗೆ ಸ್ಥಳ ಪರಿಶೀಲನೆ ನಡೆಸುವ ಕುರಿತು ಸೂಚನೆ ನೀಡದೆ, ಈ ಹಂತದಲ್ಲಿಯೇ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬೇಕೆನ್ನುವ ಸಂಸ್ಥೆಯ ಕೋರಿಕೆಯನ್ನು ತಿರಸ್ಕರಿಸಲಾಗುವುದು.

**2018–19ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ:**

| ಕ್ರ ಸಂ | ಘಟನಾವಳಿಗಳ ವಿವರ | ದಿನಾಂಕ |
|---|---|---|
| 1 | ಅರ್ಹ ಟ್ರಸ್ಟ್ / ಸಂಸ್ಥೆಯ ಆಡಳಿತ ಮಂಡಳಿಗಳು ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಶುಲ್ಕ ರೂ. 36,000/- ದೊಂದಿಗೆ ಅರ್ಜಿಯನ್ನು ಅನ್‌ಲೈನ್ ಮೂಲಕ ಸಲ್ಲಿಸುವ ಕಡೆಯ ದಿನಾಂಕ (Form – I ರಲ್ಲಿ) – (ನಿಯಮ–4 ರಂತೆ). | 31-01-2018 |
| 2 | ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿರುವ ಹಾಗೂ ರಿಜಿಸ್ಟರ್‌ನಲ್ಲಿ ನೋಂದಾಯಿಸಲ್ಪಟ್ಟ ಟ್ರಸ್ಟ್ / ಸೊಸೈಟಿಗಳಿಗೆ ನಿರ್ದೇಶನಾಲಯದಿಂದ Letter of intent ನೀಡಲು ಕೊನೆಯ ದಿನಾಂಕ | 06-02-2018 |
| 3 | ನಿರ್ದೇಶನಾಲಯವು ನೀಡಿರುವ Letter of intentಗೆ ಆಡಳಿತ ಮಂಡಳಿಯವರು 2018–19ನೇ ಶೈಕ್ಷಣಿಕ ಸಾಲಿನಲ್ಲಿಯೇ ಖಾಸಗಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ನಿಯಮ – 4ರಂತೆ ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ನಿಗದಿತ ನಮೂನೆಯೊಂದಿಗೆ ಪ್ರಸ್ತಾವನೆಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ | 20-02-2018 |
| 4 | ಜಿಲ್ಲಾ ತಪಾಸಣಾ ಸಮಿತಿಯು ಉದ್ದೇಶಿತ ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ವರದಿ ಸಲ್ಲಿಸುವ ಕೊನೆಯ ದಿನಾಂಕ<br>1) ನಿರ್ದೇಶನ ನೀಡಿದ 15 ದಿನಗಳ ಒಳಗಾಗಿ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ಸಮಿತಿಯು ವರದಿಯನ್ನು ದಾಖಲೆಗಳೊಂದಿಗೆ ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸುವುದು.<br>2) ತಪಾಸಣಾ ಸಮಿತಿಯು ನೀಡುವ ವರದಿಯನ್ನು ಜಿಲ್ಲಾ ಉಪ ನಿರ್ದೇಶಕರು ಮುಂದಿನ 05 ದಿನಗಳ ಒಳಗಾಗಿ ನಿರ್ದೇಶನಾಲಯಕ್ಕೆ ತಲುಪಿಸುವುದು. | 17-03-2018 |

"ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ"

25/1/18

ನಿರ್ದೇಶಕರ ಪರವಾಗಿ

ಪದವಿ ಪೂರ್ವ ಶಿಕ್ಷಣ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 634 ಎಸ್‌ಹೆಚ್‌ಹೆಚ್ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:24-01-2018.

## ಅಧಿಸೂಚನೆ

ವಿಷಯ:- 2018-19ನೇ ಸಾಲಿನಲ್ಲಿ ಹೊಸದಾಗಿ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಶಾಶ್ವತ ಅನುದಾನರಹಿತವಾಗಿ ಪ್ರಾರಂಭಿಸಲು ನೋಂದಾಯಿತ ಅರ್ಹ ಸಂಸ್ಥೆಗಳಿಂದ ಅರ್ಜಿಯನ್ನು ಆಹ್ವಾನಿಸುವ ಬಗ್ಗೆ

ಓದಲಾಗಿದೆ:-
1. ಕರ್ನಾಟಕ ಶಿಕ್ಷಣ ಕಾಯ್ದೆ, 1983 ಸೆಕ್ಷನ್ 30 ಮತ್ತು 31.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು, 1997.
3. ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರ) ನಿಯಮಗಳು, 2006.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 09 ಪಿಜಿಸಿ 2017 ದಿನಾಂಕ 07-01-2017.

* * *

2018-19ನೇ ಸಾಲಿನಲ್ಲಿ ಹೊಸದಾಗಿ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಶಾಶ್ವತ ಅನುದಾನರಹಿತವಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಅರ್ಹ ನೋಂದಾಯಿತ ಸಂಸ್ಥೆಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಇಲಾಖಾ ವೈಬ್‌ಸೈಟ್ ನಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ವೈಬ್‌ಸೈಟ್ ವಿಳಾಸ: www.pue.kar.nic.in.

1) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 136 ಟಿಪಿಯು 1999. ದಿನಾಂಕ:09-10-2006ರನ್ವಯ ಜಾರಿಯಾಗಿರುವ ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಅನುದಾನ, ಇತ್ಯಾದಿ) ನಿಯಮಗಳು 2006, ಈ ನಿಯಮಗಳ ನಿಯಮ 4(2) ಮತ್ತು 4(3) ರಂತೆ, ಕೆಳಕಂಡ ಕ್ರಮಗಳನ್ನು ಅನುಸರಿಸುವುದು:-

1. ಸಂಸ್ಥೆ / ಟ್ರಸ್ಟ್ ಹೊಸದಾಗಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳದಲ್ಲಿ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2)(a) ರಂತೆ ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿಯೇ (ಪ್ರತ್ಯೇಕವಾಗಿ) 25000 (ಇಪ್ಪತ್ತೈದು ಸಾವಿರ) ಚದರ ಅಡಿಗಳ ನಿವೇಶನವನ್ನು ಹೊಂದಿರಬೇಕು ಹಾಗೂ ನಿಯಮ 4(2)ರಲ್ಲಿ ನಿರ್ದಿಷ್ಟಪಡಿಸಿರುವಂತೆ ಪ್ರಾಂಶುಪಾಲರ ಕೊಠಡಿ, ಕಚೇರಿ ಕೊಠಡಿ, ಸಿಬ್ಬಂದಿಕೊಠಡಿ, ಬೋಧನಾ ಕೊಠಡಿಗಳು, ಗ್ರಂಥಾಲಯ, ಪ್ರಯೋಗಾಲಯಗಳು, ಶೌಚಾಲಯ, ಸೈಕಲ್ ಸ್ಟ್ಯಾಂಡ್, ಆಟದ ಮೈದಾನ ಹಾಗೂ ನೀರಿನ ಸೌಲಭ್ಯ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ಸುಸಜ್ಜಿತ ಕಟ್ಟಡವನ್ನು ಹೊಂದಿರತಕ್ಕದ್ದು.

2. ಸದರಿ ನಿವೇಶನವು ಸಂಸ್ಥೆಯ/ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿದ್ದು, ಸಂಸ್ಥೆಯ ಅಧ್ಯಕ್ಷರ / ಕಾರ್ಯದರ್ಶಿಯ ಪದನಾಮದಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ನಿಯಮಗಳ ಅನ್ವಯ ನೋಂದಣಿಯಾಗಿರಬೇಕು.
3. ನಿವೇಶನ / ಕಟ್ಟಡವನ್ನು ಬಾಡಿಗೆಗೆ ಪಡೆದು ಪದವಿ ಪೂರ್ವ ಕಾಲೇಜನ್ನು ನಡೆಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.
4. Letter of intent ಪಡೆದ 03 (ಮೂರು) ವರ್ಷದೊಳಗೆ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳದಿದ್ದಲ್ಲಿ, ನಿಯಮ 4(4) ರಂತೆ ಅವಧಿಯನ್ನು ವಿಸ್ತರಿಸಲು ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ, ನೀಡಿರುವ Letter of intentನ್ನು ನಿಯಮ 4(12) ರಂತೆ ರದ್ದುಗೊಳಿಸಲಾಗುವುದು. Letter of intent ಮೂರು ವರ್ಷಗಳ ನಂತರ ತನ್ನ ಸಿಂಧುತ್ವವನ್ನು / ಮಾನ್ಯತೆಯನ್ನು ಕಳೆದುಕೊಳ್ಳುವುದರಿಂದ ಮೂರು ವರ್ಷಗಳೊಳಗೆ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳದಿದ್ದಲ್ಲಿ, ಮುಂದಿನ ವರ್ಷಗಳಲ್ಲಿ ಪುನಃ ಹೊಸದಾಗಿ ಅರ್ಜಿ ಶುಲ್ಕವನ್ನು ಸಂದಾಯ ಮಾಡಿ ಅರ್ಜಿ ಸಲ್ಲಿಸಬೇಕಾಗುತ್ತದೆ.
5. ಒಂದು ವೇಳೆ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮ 4(2) ಮತ್ತು 4(3) ರಂತೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದ್ದಲ್ಲಿ, ನಿಯಮ 4(4) ರಂತೆ ಅಗತ್ಯ ಮಾಹಿತಿ ಮತ್ತು ದಾಖಲೆಗಳೊಂದಿಗೆ ವೇಳಾಪಟ್ಟಿಗೆ ಅನುಗುಣವಾಗಿ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.

2) ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಬಹು ಮುಖ್ಯವಾಗಿ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು:

1. ಸಂಸ್ಥೆ / ಟ್ರಸ್ಟ್ ಅಧಿಕೃತವಾಗಿ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರಬೇಕು.
2. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರಬಾರದು. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ಯಾವುದೇ ರೀತಿಯ ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆ ನೀಡಿರಬಾರದು. ಸಂಸ್ಥೆಯನ್ನು ಟ್ರಸ್ಟ್ ಆಗಿ ಅಥವಾ ಟ್ರಸ್ಟ್‌ನ್ನು ಸಂಸ್ಥೆಯಾಗಿ ನಿಯಮಬಾಹಿರವಾಗಿ ಪರಿವರ್ತಿಸಿರಬಾರದು. ಈ ಬಗ್ಗೆ ಸಂಸ್ಥೆ/ಟ್ರಸ್ಟ್‌ನ ಸಕ್ಷಮ ಪ್ರಾಧಿಕಾರಿಯು ರೂ.200/-ರ ಇ-ಸ್ಟ್ಯಾಂಪ್ ಪೇಪರ್‌ನಲ್ಲಿ ನೋಟರಿ ದೃಢೀಕೃತ ಅಫಿಡವಿಟ್ (ಪ್ರಮಾಣ ಪತ್ರ) ಸಲ್ಲಿಸತಕ್ಕದ್ದು.
3. ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಪ್ರಸ್ತುತ ಸಾಲಿನವರೆಗೆ ನವೀಕರಣಗೊಂಡಿರಬೇಕು. ಸಕ್ಷಮ ಪ್ರಾಧಿಕಾರವು ದೃಢೀಕರಿಸಿರುವ ಪ್ರಸ್ತುತ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯರ ದೃಢೀಕೃತ ಪಟ್ಟಿಯನ್ನು ಹೊಂದಿರಬೇಕು.
4. ಸಂಸ್ಥೆಯ ಬೈಲಾದಲ್ಲಿರುವಂತೆ ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯರಿರಬೇಕು.
5. ಸಂಸ್ಥೆ / ಟ್ರಸ್ಟ್ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮಗಳನ್ವಯ ರೂ.28.80 ಲಕ್ಷಗಳ ಸ್ಥಿರ ಮತ್ತು ಚರ ಆಸ್ತಿಯನ್ನು ಹೊಂದಿರಬೇಕು.
6. ಸಂಸ್ಥೆ / ಟ್ರಸ್ಟ್‌ನ ಆಡಿಟ್‌ನ್ನು ನಿಯಮಾನುಸಾರ ಪ್ರಸ್ತುತ ಸಾಲಿನವರೆಗೆ ಮಾಡಿಸಿರಬೇಕು.
7. ಸಂಸ್ಥೆ / ಟ್ರಸ್ಟ್ ತನ್ನ ಸ್ವಾಧೀನಾನುಭವದಲ್ಲಿ ಕನಿಷ್ಠ 25000 (ಇಪ್ಪತ್ತೈದು ಸಾವಿರ) ಚದರ ಅಡಿಗಳ ನಿವೇಶನವನ್ನು ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿ ಹೊಂದಿರಬೇಕು.

8. ಸದರಿ 25000 ಚದರ ಅಡಿಗಳ ನಿವೇಶನ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಅಧ್ಯಕ್ಷರು / ಚೇರ್‌ಮನ್ / ಕಾರ್ಯದರ್ಶಿಯವರ ಪದನಾಮದಲ್ಲಿ ಇರಬೇಕು. ಈ ಸ್ಥಿರ ಆಸ್ತಿಯು ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಇರಬಾರದು.
9. ಕಟ್ಟಡವು ಆಡಳಿತ ಮಂಡಳಿಯ ಸ್ವಂತದ್ದಾಗಿರದೆ ಭೋಗ್ಯಕ್ಕೆ ಪಡೆದಿದ್ದಲ್ಲಿ, ಭೋಗ್ಯದ ಕರಾರನ್ನು ಕನಿಷ್ಠ 30 ವರ್ಷಗಳ ಅವಧಿಗೆ ಮಾಡಿರಬೇಕು. ಸದರಿ ಕರಾರನ್ನು 30 ವರ್ಷಗಳು ಪೂರ್ಣಗೊಳ್ಳುವ ಮುನ್ನ ರದ್ದುಪಡಿಸಲು ಅಥವಾ ತಿದ್ದುಪಡಿ ಮಾಡಲು ಅವಕಾಶವಿಲ್ಲದಂತೆ ಕರಾರು ಒಪ್ಪಂದವಾಗಿರಬೇಕು. ಈ ಕರಾರು ಒಪ್ಪಂದವನ್ನು ನಿಗದಿತ ಮೊತ್ತದ ಇ-ಸ್ಟಾಂಪ್ ಪೇಪರ್‌ನಲ್ಲಿ ಸಂಬಂಧಿಸಿದ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಾಯಿಸಿರಬೇಕು. ಹಾಗೂ ಸದರಿ ನಿವೇಶನ ಮತ್ತು ಕಟ್ಟಡದ ಖಾತಾ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಹೆಸರಿಗೆ ವರ್ಗಾವಣೆಯಾಗಿರಬೇಕು.

10. ನೋಟರಿಯವರ ಸಮ್ಮುಖದಲ್ಲಿ ಸತ್ಯಾಪನ ಮಾಡಿರುವ ಕರಾರು ಪತ್ರಗಳಿಗೆ ನಿಯಮಗಳನ್ವಯ ಮಾನ್ಯತೆ ಇರುವುದಿಲ್ಲ. ಬಾಡಿಗೆ ಕರಾರಿನ ಮೇಲೆ ಪಡೆದಿರುವ ನಿವೇಶನ / ಕಟ್ಟಡವನ್ನು ಸಂಸ್ಥೆ / ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿರುವ ನಿವೇಶನ / ಕಟ್ಟಡ ಎಂದು ಪರಿಗಣಿಸಲು ನಿಯಮಗಳಲ್ಲಿ ಅವಕಾಶಗಳಿರುವುದಿಲ್ಲ.

11. ಉದ್ದೇಶಿತ ಪದವಿ ಪೂರ್ವ ಕಾಲೇಜಿನ ನಿವೇಶನ / ಕಟ್ಟಡವು ನಿಯಮ 4ರನ್ವಯ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕು.

12. ಸರ್ಕಾರಿ ಪದವಿ ಪೂರ್ವ ಕಾಲೇಜು ಇರುವ 3 ಕಿಲೋಮೀಟರ್ ಅಂತರದಲ್ಲಿ ಯಾವುದೇ ಹೊಸ ಅನುದಾನರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅನುಮತಿ ನೀಡಬಾರದು.

13. ಈಗಾಗಲೇ ಅನುದಾನಸಹಿತ, ಅನುದಾನರಹಿತ ಕಾಲೇಜುಗಳಿದ್ದಲ್ಲಿ ಅಂತಹ ಸ್ಥಳದಲ್ಲಿ ಹೊಸ ಅನುದಾನರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬಾರದು ಇದರ ಅಂತರವು ಸಹ 3 ಕಿಲೋ ಮೀಟರ್ ಆಗಿರಬೇಕು.

3) ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ಸಲ್ಲಿಸುವ ಪ್ರಸ್ತಾವನೆಯು ನಿಯಮ 4(2), 4(3) ಮತ್ತು 4(4)ಕ್ಕೆ ಅನುಗುಣವಾಗಿ ಇಲ್ಲದಿದ್ದಲ್ಲಿ ಸ್ಥಳ ಪರಿಶೀಲನೆಗಾಗಿ ತಪಾಸಣಾ ಸಮಿತಿಗೆ ಸೂಚನೆ ನೀಡಲಾಗುವುದಿಲ್ಲ, ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬೇಕೆನ್ನುವ ಅಂತಹ ಪ್ರಸ್ತಾವನೆಗಳನ್ನು ನಿರ್ದೇಶಕರ ಕಛೇರಿಯ ಹಂತದಲ್ಲಿಯೇ ಸಂಸ್ಥೆಯ ಕೋರಿಕೆಯನ್ನು ತಿರಸ್ಕರಿಸಲಾಗುವುದು.

**2018-19ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ**

| ಕ್ರ | ಘಟನಾವಳಿಗಳ ವಿವರ | ದಿನಾಂಕ |
|---|---|---|
| 1 | ಅರ್ಹ ಟ್ರಸ್ಟ್ / ಸಂಸ್ಥೆಯ ಆಡಳಿತ ಮಂಡಳಿಗಳು ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಶುಲ್ಕ ರೂ. 36,000/- ದೊಂದಿಗೆ ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕಡೆಯ ದಿನಾಂಕ (Form-I ರಲ್ಲಿ) - (ನಿಯಮ- 4 ರಂತೆ). | 31-01-2018 |

| | | |
|---|---|---|
| 2 | ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿರುವ ಹಾಗೂ ರಿಜಿಸ್ಟರ್‌ನಲ್ಲಿ ನೋಂದಾಯಿಸಲ್ಪಟ್ಟ ಟ್ರಸ್ಟ್ / ಸೊಸೈಟಿಗಳಿಗೆ ನಿರ್ದೇಶನಾಲಯದಿಂದ Letter of intent ನೀಡಲು ಕೊನೆಯ ದಿನಾಂಕ | 06-02-2018 |
| 3 | ನಿರ್ದೇಶನಾಲಯವು ನೀಡಿರುವ Letter of intentಗೆ ಆಡಳಿತ ಮಂಡಳಿಯವರು 2018-19ನೇ ಶೈಕ್ಷಣಿಕ ಸಾಲಿನಲ್ಲಿಯೇ ಖಾಸಗಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ನಿಯಮ - 4ರಂತೆ ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ನಿಗದಿತ ನಮೂನೆಯೊಂದಿಗೆ ಪ್ರಸ್ತಾವನೆಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ | 20-02-2018 |
| 4 | ಜಿಲ್ಲಾ ತಪಾಸಣಾ ಸಮಿತಿಯು ಉದ್ದೇಶಿತ ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ವರದಿ ಸಲ್ಲಿಸುವ ಕೊನೆಯ ದಿನಾಂಕ<br>1) ನಿರ್ದೇಶನ ನೀಡಿದ 15 ದಿನಗಳ ಒಳಗಾಗಿ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ಸಮಿತಿಯು ವರದಿಯನ್ನು ದಾಖಲೆಗಳೊಂದಿಗೆ ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸುವುದು.<br>2) ತಪಾಸಣಾ ಸಮಿತಿಯು ನೀಡುವ ವರದಿಯನ್ನು ಜಿಲ್ಲಾ ಉಪ ನಿರ್ದೇಶಕರು ಮುಂದಿನ 05 ದಿನಗಳ ಒಳಗಾಗಿ ನಿರ್ದೇಶನಾಲಯಕ್ಕೆ ತಲುಪಿಸುವುದು. | 17-03-2018 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶೇಖರ), 24/1/2018
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.(ಪದವಿ ಪೂರ್ವ ಶಿಕ್ಷಣ)

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ನಿರ್ದೇಶನಾಲಯ, ವಿಕಾಸಸೌಧ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಪ್ರಕಟಿತ 100 ಪ್ರತಿಗಳನ್ನು ಒದಗಿಸಲು.

ಪ್ರತಿ:-

1. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ,18ನೇ ಕ್ರಾಸ್, ಬೆಂಗಳೂರು.
2. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು(ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಮೂಲಕ).
3. ಶಾಖಾ ರಕ್ಷಾ ಕಡತ /ಹೆಚ್ಚಿನ ಪ್ರತಿಗಳು.